## ನಿಮ್ಮೊಡನೆ

# ಅಪೌಷ್ಟಿಕತೆಯ ಅಪಮಾನ

**ಮಹಿಳೆಯರು ಮತ್ತು ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿರುವ ಪರಿಸ್ಥಿತಿಯಲ್ಲಿ ಸುಧಾರಣೆ ಕಾಣದಿರುವ ವಸ್ತುಸ್ಥಿತಿಯನ್ನು ಪ್ರಧಾನಿಯವರು 'ರಾಷ್ಟ್ರೀಯ ಅಪಮಾನ' ಎಂದು ಬಣ್ಣಿಸಿದ್ದಾರೆ. ಇದು ಬಡತನ ನಿವಾರಣೆಯ ಎಲ್ಲ ಕಾರ್ಯಕ್ರಮಗಳ ವೈಫಲ್ಯದ ಸಂಕೇತ. 'ಅಪಮಾನ' ಎಂದು ಒಪ್ಪಿಕೊಳ್ಳುವುದರಿಂದ ಪರಿಸ್ಥಿತಿ ಬದಲಾಗುವುದಿಲ್ಲ.**



ಇನ್ನು ಎಂಟು ವರ್ಷಗಳಲ್ಲಿ ದೇಶವು ಅಭಿವೃದ್ಧಿ ಹೊಂದಿದ ದೇಶಗಳ ಸಾಲಿನಲ್ಲಿಯೇ ಮುಂಚೂಣಿಯಲ್ಲಿ ಇರಬೇಕು ಎಂಬ ಮಾತುಗಳು ಕೇಳಿಬರುತ್ತವೆ. ಇದಕ್ಕೆ ತಕ್ಕ ವಾತಾವರಣ ಇಲ್ಲವೆಂದಲ್ಲ. ಜನಸಂಖ್ಯೆಯಲ್ಲಿ ವಿಶ್ವದ ಎರಡನೇ ದೊಡ್ಡ ದೇಶ ನಮ್ಮದು. ಮಾನವ ಸಂಪನ್ಮೂಲಕ್ಕೆ ಯಾವತ್ತೂ ಕೊರತೆ ಇಲ್ಲದಷ್ಟು ಸಮೃದ್ಧಿ. ನೈಸರ್ಗಿಕ ಸಂಪನ್ಮೂಲವೂ ಅಪರಿಮಿತ. ಉಷ್ಣ ವಲಯ ಮತ್ತು ಸಮಶೀತೋಷ್ಣ ವಲಯದ ಹವಾಮಾನ ಪರಿಸ್ಥಿತಿ. ಜನಸಂಪತ್ತನ್ನೂ, ನಿಸರ್ಗ ಸಂಪತ್ತನ್ನೂ ಸಮಷ್ಟಿಯ ಅಭಿವೃದ್ಧಿಗೆ ಬಳಸಿಕೊಳ್ಳುವ ಸ್ವಾತಂತ್ರ್ಯವನ್ನು ಒದಗಿಸಿಕೊಟ್ಟ ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆ. ನಮ್ಮ ಭವಿಷ್ಯವನ್ನು ನಾವೇ ರೂಪಿಸಿಕೊಳ್ಳುವ ಅವಕಾಶ. ಸ್ವತಂತ್ರ ಆಳ್ವಿಕೆಯ ಆರು ದಶಕಗಳಲ್ಲಿ ತಂತ್ರಜ್ಞಾನದಲ್ಲಿ ಮಾಡಿರುವ ಅಸಾಧಾರಣ ಸಾಧನೆ. ಈ ಎಲ್ಲ ಅಂಶಗಳೂ ದೇಶವನ್ನು ಕೆಲವೇ ವರ್ಷಗಳಲ್ಲಿ ಅಭಿವೃದ್ಧಿ ಹೊಂದಿದ ದೇಶಗಳ ಸಾಲಿಗೆ ನಿಲ್ಲಿಸಬಲ್ಲವು ಎಂಬುದರಲ್ಲಿ ಸಂಶಯವಿಲ್ಲ.

ಪ್ರಜಾಪ್ರಭುತ್ವ ವ್ಯವಸ್ಥೆ ಇಲ್ಲಿ ಬಲವಾಗಿ ಬೇರು ಬಿಟ್ಟಿರುವುದು ಸಮಾಧಾನದ ಅಂಶ. ಆದರೆ, ಇದರಿಂದ ಸಮಾಜದ ಸರ್ವಾಂಗೀಣ ಅಭಿವೃದ್ಧಿ ಆಗುತ್ತಿಲ್ಲ ಎಂಬುದು ವಿಷಾದಕರ ಸಂಗತಿ. ಮೂಲಸೌಕರ್ಯಗಳ ವಿಷಯದಲ್ಲಿ ನಗರ ಪ್ರದೇಶಗಳಿಗೂ, ಗ್ರಾಮಾಂತರ ಭಾಗಗಳಿಗೂ ತುಂಬ ವ್ಯತ್ಯಾಸ ಉಳಿದುಕೊಂಡಿದೆ. ಇದನ್ನು ಸರಿಪಡಿಸಿಕೊಳ್ಳುವುದರಲ್ಲಿ ಪ್ರಾಮಾಣಿಕ ಪ್ರಯತ್ನದ ಕೊರತೆ ಕಾಣುತ್ತಿದೆ. ಸ್ವಯಂ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವುದಕ್ಕೆ ಅಧಿಕಾರವನ್ನು ಗ್ರಾಮೀಣ ಹಂತದವರೆಗೆ ವಿಕೇಂದ್ರೀಕರಣಗೊಳಿಸಿದ್ದರೂ ಹೆಚ್ಚಿನ ಪ್ರಯೋಜನ ಕಾಣುತ್ತಿಲ್ಲ. ಸರ್ಕಾರದ ವತಿಯಿಂದ ಮಾತ್ರವಲ್ಲದೆ, ಸ್ವಯಂ ಸೇವಾ ಕ್ಷೇತ್ರದಲ್ಲಿ ಆಗಾಗ ನಡೆಸುವ ವ್ಯಾಪಕ ಸಮೀಕ್ಷೆಗಳು ಜನತೆಯ ಜೀವನ ಮಟ್ಟ ಕುರಿತ ನೈಜ ಚಿತ್ರವನ್ನು ಬಯಲಿಗೆ ತರುತ್ತಿವೆ. ಜನಕಲ್ಯಾಣಕ್ಕೆ ಮೀಸಲಿಟ್ಟ ಹಣ ಖರ್ಚಾಗುತ್ತಿದ್ದರೂ ಅದು ಜನತೆಯನ್ನು ಮುಟ್ಟುತ್ತಿಲ್ಲ ಎಂಬ ಆಘಾತಕಾರಿ ಸಂಗತಿಗಳೂ ಬಯಲಿಗೆ ಬರುತ್ತಿವೆ.

ಇಂಥದ್ದೊಂದು ಸಮೀಕ್ಷಾ ವರದಿ ಈಚೆಗೆ ಪ್ರಕಟವಾಗಿದೆ. ಗ್ರಾಮೀಣ ಪ್ರದೇಶದ ಮಹಿಳೆಯರು ಮತ್ತು ಮಕ್ಕಳಲ್ಲಿ ತೀವ್ರ ಸ್ವರೂಪದ ಅಪೌಷ್ಟಿಕತೆ ಉಳಿದುಕೊಂಡಿದ್ದು ಇದಕ್ಕಾಗಿ ಇದುವರೆಗೆ ಮಾಡಿದ ಕೋಟ್ಯಂತರ ರೂಪಾಯಿ ಸಾರ್ವಜನಿಕ ಹಣವೆಲ್ಲ ಎಲ್ಲೋ ಸೋರಿ ಹೋಗಿರುವುದನ್ನು ಈ ಸಮೀಕ್ಷೆ ಬಯಲು ಮಾಡಿದೆ. ಪಂಚವಾರ್ಷಿಕ ಯೋಜನೆಗಳನ್ನು ಹಮ್ಮಿಕೊಂಡು ದೇಶದ ಸಮಗ್ರ ಅಭಿವೃದ್ಧಿಯನ್ನು ಉದ್ದೇಶಿಸಿ ಅನುಷ್ಠಾನಗೊಳಿಸಿದ ಯೋಜನೆಗಳ ನಂತರವೂ ಮಹಿಳೆಯರು ಮತ್ತು ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿರುವ ಪರಿಸ್ಥಿತಿಯಲ್ಲಿ ಸುಧಾರಣೆ ಕಾಣದಿರುವ ವಸ್ತುಸ್ಥಿತಿಯನ್ನು ಪ್ರಧಾನಿಯವರು 'ರಾಷ್ಟ್ರೀಯ ಅಪಮಾನ'ವೆಂದು ಬಣ್ಣಿಸಿದ್ದಾರೆ. ಇದು ಬಡತನ ನಿವಾರಣೆಯ ಎಲ್ಲ ಕಾರ್ಯಕ್ರಮಗಳ ವೈಫಲ್ಯದ ಸಂಕೇತ. 'ಅಪಮಾನ' ಎಂದು ಒಪ್ಪಿಕೊಳ್ಳುವುದರಿಂದ ಪರಿಸ್ಥಿತಿ ಬದಲಾಗುವುದಿಲ್ಲ.

ಈಚೆಗೆ ಪ್ರಕಟವಾದ ಇನ್ನೊಂದು ಸಮೀಕ್ಷಾ ವರದಿ ಕುತೂಹಲಕಾರಿಯಾಗಿದೆ. ಇದು ಏಷ್ಯಾದ ವ್ಯಾಪ್ತಿಗೆ ಸಂಬಂಧಿಸಿದ ಸಮೀಕ್ಷೆ. ಏಷ್ಯಾದ ದೇಶಗಳಲ್ಲಿ ಭಾರತದ ಅಧಿಕಾರಶಾಹಿ ಅತ್ಯಂತ ಭ್ರಷ್ಟವಾದದ್ದು ಎಂಬುದು ಆ ಸಮೀಕ್ಷೆಯ ಸಾರ. ಜನತೆಯ ಕಲ್ಯಾಣಕ್ಕೆ ರೂಪಿಸುವ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುತ್ತಿರುವ ಅಧಿಕಾರಶಾಹಿಯೇ ಅತ್ಯಂತ ಭ್ರಷ್ಟವಾಗಿದೆ ಎಂದಾಗ ಗಾಬರಿ ಮೂಡಿಸುತ್ತಿರುವ ಪರಿಣಾಮಗಳಿಗೆ ಆಶ್ಚರ್ಯ ಪಡುವಂಥದ್ದಿಲ್ಲ. ಭ್ರಷ್ಟ ಅಧಿಕಾರಶಾಹಿಯನ್ನು ನಿಯಂತ್ರಿಸುವ ಶಕ್ತಿ ಜನಪ್ರತಿನಿಧಿಗಳಲ್ಲಿ ಇದೆ. ದೇಶದ ಈಗಿನ ಪರಿಸ್ಥಿತಿ ಎಂದರೆ ಜನಪ್ರತಿನಿಧಿಗಳು ಮತ್ತು ಅಧಿಕಾರಶಾಹಿಯ ಮಧ್ಯೆ ಈ ವಿಷಯದಲ್ಲಿ ವ್ಯತ್ಯಾಸ ಇಲ್ಲದಂತಹ ವಸ್ತುಸ್ಥಿತಿ. ಇದು ಬದಲಾಗದೆ ಸುಧಾರಣೆ ಮರೀಚಿಕೆ.

ದೇಶದಲ್ಲಿಯೇ ಉತ್ತಮ ನೈಸರ್ಗಿಕ ಪರಿಸ್ಥಿತಿಯ ರಾಜ್ಯ ಕರ್ನಾಟಕ. ಹದನಾದ ಹವಾಗುಣ. ಸಮೃದ್ಧ ನೈಸರ್ಗಿಕ ಸಂಪತ್ತು. ತಮ್ಮಷ್ಟಕ್ಕೆ ನೆಮ್ಮದಿಯನ್ನು ಕಾಣುವ ಸಾಮಾನ್ಯ ಜನ. ಜನತೆಯ ಶಾಂತಿಪ್ರಿಯತೆಯನ್ನೇ ದೌರ್ಬಲ್ಯ ಎಂದು ಪರಿಗಣಿಸಿದಂತಿರುವ ಆಡಳಿತಗಾರರು (ಇವರಲ್ಲಿ ಜನಪ್ರತಿನಿಧಿಗಳೂ, ಅಧಿಕಾರಶಾಹಿಯೂ ಸೇರಿದಂತೆ) ಇಷ್ಟರವರೆಗೂ ತಮ್ಮ ಸ್ವಾರ್ಥ ಲಾಲಸೆಯನ್ನೇ ಮೆರೆದಿದ್ದಾರೆ. ಅದರ ಪರಿಣಾಮ ರಾಜ್ಯದ ಅನೇಕ ಜಿಲ್ಲೆಗಳಲ್ಲಿ, ವಿಶೇಷವಾಗಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತಿದೆ. ರಕ್ತಹೀನತೆಯಿಂದ ಬಳಲುವ ಮಹಿಳೆಯರು ಅಪೌಷ್ಟಿಕತೆಯಿಂದ ನರಳುವ ಮಕ್ಕಳ ಸಂಖ್ಯೆ ಗ್ರಾಮೀಣ ಭಾಗಗಳಲ್ಲಿ ಹೆಚ್ಚಾಗುತ್ತಿರುವುದು ಆರೋಗ್ಯಕರ ಸಮಾಜ ಹೆಮ್ಮೆ ಪಡುವ ಸಂಗತಿಯಲ್ಲ. ಮಕ್ಕಳಿಗಾಗಿ ಬಿಡುಗಡೆಯಾದ ಹಣದ ದುರ್ಬಳಕೆ ಮಾನವೀಯತೆಗೆ ಎಸಗುವ ಅಪಚಾರ. ಈ ಸ್ಥಿತಿ ಬದಲಾಗಬೇಕು.

■ ಲಕ್ಷ್ಮಣ ಕೊಡಸೆ